

ಕಾರ್ಯ ಪೂರ್ತಿಗೊಳ್ಳಲು ಐದು ವರ್ಷಗಳೇ ಹಿಡಿದವು.

ಈ ತಾಣದಲ್ಲಿ ಬಂದಿಳಿದಾಗ ಎತ್ತರವಾದ ಒಂದೆರಡು ಸೂಪರ್ ಟ್ರೀಗಳು ಕಾಣುತ್ತವೆ. ಇವು ನಮ್ಮನ್ನು ಸ್ವಾಗತಿಸಲೆಂದೇ ನಿಂತ ಹಾಗೆನಿಸುತ್ತದೆ. 'ಗಾರ್ಡನ್ಸ್ ಬೈ ದ ಬೇ'ದ ಜೀವಾಳ ಎನಿಸಿರುವ ಎರಡು ಸುಂದರ ಗೋಪುರಗಳು ಮುಂದೆ ಸಾಗಿದಂತೆ ಗೋಚರಿಸುತ್ತವೆ. ಒಂದು ಫ್ಲವರ್ ಡೋಮ್ ಇನ್ನೊಂದು ಕ್ಲೌಡ್ ಫಾರೆಸ್ಟ್ ಡೋಮ್. ಒಳಹೊಕ್ಕರೆ ಒಂದೊಂದು ಡೋಮ್‌ನಲ್ಲಿ ಒಂದೊಂದು ಪ್ರಪಂಚವೇ ತೆರೆದು ಕೊಳ್ಳುತ್ತದೆ.

## ಹೂಗಳ ಗೋಪುರ

ಫ್ಲವರ್ ಡೋಮ್ 1.2 ಹೆಕ್ಟೇರ್ ಜಾಗವನ್ನು ಆವರಿಸಿರುವ ಇದರ ಅಳತೆ 183x130x38 ಮೀಟರ್‌ಗಳು. ಅಂದರೆ ಫುಟ್‌ಬಾಲ್ ಮೈದಾನದ ಎರಡೂವರೆ ಪಟ್ಟು ಅಳತೆ. ಅಂಟಾರ್ಟಿಕಾ ಖಂಡವನ್ನು ಬಿಟ್ಟು ಉಳಿದ ಖಂಡಗಳ ವಿವಿಧ ಬಗೆಯ ಹೂ ಹಾಗೂ ಸಸ್ಯರಾಶಿಯನ್ನು ಈ ಗೋಪುರ ತನ್ನ ಒಡಲೊಳಗೆ ತುಂಬಿಕೊಂಡಿದೆ. ಮೇಲ್ಛಾವಣಿಯ ಆಧಾರಕ್ಕಾಗಿ ಕಂಬಗಳೇ ಇಲ್ಲದ ಡೋಮ್ ಎಂದರೆ ಜಗತ್ತಿನಲ್ಲಿ ಇದೊಂದೇ. ತ್ರಿಯ ಆಕಾರದಲ್ಲಿ ಇದನ್ನು ನಿರ್ಮಿಸಲಾಗಿದೆ. ಇದರ ಪಟ್ಟಿಗಳು ಮನುಷ್ಯನ ಎದೆಗೂಡಿನಂತೆ ಕಾಣುತ್ತವೆ. 42 ಬೇರೆ ಬೇರೆ ಅಳತೆ ಹಾಗೂ ಆಕಾರದ 3332 ಗಾಜಿನ ತುಂಡುಗಳಿಂದ ಮೇಲ್ಛಾವಣಿಯನ್ನು ರಚಿಸಲಾಗಿದೆ. ಇವುಗಳ ಹೊರ ಮೈಗೆ ರಾಸಾಯನಿಕ ಲೇಪನ ಮಾಡಲಾಗಿದೆ. ಇದರ ಉದ್ದೇಶ ಸೂರ್ಯನ ಕಿರಣಗಳ ಶೇ. 65ರಷ್ಟು ಮಾತ್ರ ಒಳಪ್ರವೇಶಿಸಬೇಕು ಎನ್ನುವುದು. ಈ ಡೋಮಿನ ಒಳಗಡೆ ತಂಪು–ಒಣ ವಾತಾವರಣ ಕಲ್ಪಿಸಲಾಗಿದೆ. ಮೆಡಿಟರೇನಿಯನ್ ಪ್ರದೇಶದ ಸಸ್ಯಗಳಿಗೆ ಬೇಕಾಗುವ ವಾತಾವರಣ ನಿರ್ಮಿಸಲಾಗಿದೆ.

ನೂರಾರು ಪ್ರಭೇದಗಳ ಹೂಗಳು ಫ್ಲವರ್ ಡೋಮಿನ ಸೌಂದರ್ಯವನ್ನು ಹೆಚ್ಚಿಸಿವೆ. ಇದರಲ್ಲಿ 200 ವರ್ಷ ಹಳೆಯ ಬೋನ್ಸಾಯ್ ಮರವಿದೆ. ಇದನ್ನು ಹೊರದೇಶದಿಂದ ಸಿಂಗಪುರಕ್ಕೆ ಹಡಗಿನ ಮೂಲಕ ತರುವ, ನಂತರ ಫ್ಲವರ್ ಡೋಮಿನ ಒಳಗೆ ಸಾಗಿಸಿ ಅಲ್ಲಿ ನೆಡುವವರೆಗಿನ ಚಟುವಟಿಕೆ ಒಂದು ದೊಡ್ಡ ಸಾಹಸದ ಕೆಲಸವೇ ಆಗಿತ್ತು. ಈ ಡೋಮಿನ ವಿಶೇಷ ಸಸ್ಯಗಳೆಂದರೆ ಆಫ್ರಿಕನ್ ಬೇಯೋಬಾಬ್, ಕ್ವೀನ್ಸ್‌ಲ್ಯಾಂಡ್ ಬಾಟ್ಲ ಟ್ರೀ, ಡ್ರಂಕನ್ ಟ್ರೀ, ಇಟಾಲಿಯನ್ ಸೈಪ್ರಸ್, ಚಿಲಿಯನ್ ಪೈನ್ ಪಾಮ್ ಹಾಗೂ ಮದಗಾಸ್ಕನ್ ಘೋಸ್ಟ್ ಟ್ರೀಗಳನ್ನು ಹೊಂದಿರುವುದು.

## ಕ್ಲೌಡ್ ಫಾರೆಸ್ಟ್ ಡೋಮ್

ಇದು ಫ್ಲವರ್ ಡೋಮಿಗಿಂತ ಗಾತ್ರದಲ್ಲಿ ಚಿಕ್ಕದಿದ್ದು, ಅದಕ್ಕಿಂತ ಎತ್ತರವಾಗಿದೆ. 0.8 ಹೆಕ್ಟೇರ್‌ನಲ್ಲಿ ರೂಪುಗೊಂಡಿದೆ. ತಂಪು ಹಾಗೂ ತೇವ ವಾತಾವರಣ ಉಳ್ಳ ಇದು ಸಮುದ್ರಮಟ್ಟಕ್ಕಿಂತ 1000–3500 ಮೀಟರ್‌ಗಳವರೆಗೆ ಎತ್ತರವುಳ್ಳ ಉಷ್ಣವಲಯದ ಪರ್ವತಗಳು ಹೊದ್ದ ಸಸ್ಯರಾಶಿಯ ಮಾದರಿಗಳನ್ನು ಇದು ತನ್ನಲ್ಲಿ ತುಂಬಿಕೊಂಡಿದೆ. ಇದರ ಒಳಗೆ ಪ್ರತಿ ಹಗಲು ಬೇಸಿಗೆ ಇದ್ದಂತೆ ಹಾಗೂ ಪ್ರತಿ ರಾತ್ರಿ ಚಳಿಗಾಲ ಇದ್ದಂತೆ. ಯಾವ ಯಾವ ಪರ್ವತಗಳಿಂದ ಸಸ್ಯಗಳನ್ನು ತಂದು ಇಲ್ಲಿ ಬೆಳೆಸಿದ್ದಾರೋ ಆಯಾ ಪರ್ವತಗಳಿಂದಲೇ ಅವುಗಳಿಗೆ ಬೇಕಾಗುವ ಮಣ್ಣನ್ನು ತಂದು ಇಲ್ಲಿ ಒದಗಿಸಿದ್ದಾರೆ. ಜೊತೆಗೆ ಬೇರೆ ಮಣ್ಣನ್ನೂ ಬೆರೆಸಿದ್ದಾರೆ.

ಈ ಡೋಮನ್ನು ಪ್ರವೇಶಿಸಿದೊಡನೆ ನೇರವಾಗಿ ಎದುರುಗಡೆ 40 ಮೀ. ಎತ್ತರದಿಂದ ಧುಮ್ಮಿಕ್ಕುವ ಜಲಪಾತವೊಂದು ತನ್ನತ್ತ ಸೆಳೆಯುತ್ತ ನಮ್ಮನ್ನು ಹುಬ್ಬೇರಿಸುವಂತೆ ಮಾಡುತ್ತದೆ. ಜಗತ್ತಿನ ಮಾನವ ನಿರ್ಮಿತ ಜಲಪಾತಗಳಲ್ಲಿ ಇದು ಪ್ರಥಮ ಸ್ಥಾನದಲ್ಲಿದೆ.

ಒಂದು ಲಿಫ್ಟ್ ನಮ್ಮನ್ನು ತುತ್ತ ತುದಿಯ 'ಲಾಸ್ಟ್ ವರ್ಲ್ಡ್'ಗೆ ತಲುಪಿಸುತ್ತದೆ. ಈ ಎತ್ತರದಲ್ಲಿ ಮೋಡಗಳು ನಿರ್ಮಾಣಗೊಳ್ಳುತ್ತವೆ. ಮಂಜು ಆವರಿಸಿ ಬಿಡುತ್ತದೆ. ಇಲ್ಲಿಂದ ಕೆಳಗಿಳಿಯಲು ಎರಡು ವಾಕ್‌ವೇಗಳಿವೆ. ಒಂದು 'ಕ್ಲೌಡ್ ವಾಕ್‌ವೇ'. ಇನ್ನೊಂದು 'ಟ್ರೀಟಾಪ್ ವಾಕ್ ವೇ'. ಈ ವಾಕ್ ವೇಗಳಲ್ಲಿ ಚಲಿಸುವಾಗ ಅಲ್ಲಿಯ ಸಸ್ಯಸಂಕುಲ ಹಾಗೂ ಮಂಜು ರೋಮಾಂಚನ ಉಂಟುಮಾಡುತ್ತವೆ.

## ಸೂಪರ್ ಟ್ರೀಗಳ ಅಚ್ಚರಿ

'ಗಾರ್ಡನ್ಸ್ ಬೈ ದ ಬೇ'ಯ ಇನ್ನೊಂದು ವಿಸ್ಮಯವೆಂದರೆ ಸೂಪರ್ ಟ್ರೀಗಳು. ಇವುಗಳ ಸಂಖ್ಯೆ ಹದಿನೆಂಟು. ಇವುಗಳನ್ನು 'ವರ್ಟಿಕಲ್ ಗಾರ್ಡನ್ಸ್' (ನಿಂತಿರುವ ತೋಟಗಳು) ಎನ್ನುತ್ತಾರೆ. ಜಗತ್ತಿನ ಏಳು ಪ್ರಾಚೀನ ಅದ್ಭುತಗಳಲ್ಲಿ ಒಂದಾಗಿದ್ದ 'ಬ್ಯಾಬಿಲೋನಿನ ತೂಗು ಉದ್ಯಾನ'ಗಳನ್ನು ಇವು ನೆನಪಿಸುತ್ತವೆ. ಒಂದೆಡೆ ಹನ್ನೆರಡು ಟ್ರೀಗಳ ಸಮೂಹವಿದೆ. ಇನ್ನುಳಿದ ಟ್ರೀಗಳು ಅಲ್ಲಲ್ಲಿ ಚದುರಿವೆ. ಈ ಸಮೂಹದಲ್ಲಿ 50 ಮೀ. ಎತ್ತರದ ಒಂದು ಅತ್ಯಂತ ದೊಡ್ಡ ಟ್ರೀ ಇದೆ. 42 ಮೀ ಎತ್ತರದ ಎರಡು ಟ್ರೀಗಳಿಗೆ ಸಂಪರ್ಕ ಕಲ್ಪಿಸಲಾಗಿದೆ. ಇದನ್ನು ಟ್ರೀ ಟಾಪ್ ವಾಕ್ ವೇ ಅಥವಾ ಏರಿಯಲ್ ವಾಕ್‌ವೇ ಎನ್ನುತ್ತಾರೆ. ಈ ಏರಿಯಲ್ ವಾಕ್ ವೇನಲ್ಲಿ ನಡೆಯುವಾಗ ಕೆಳಗಿರುವ ತೋಟಗಳ ಮೇಲೆ ತೇಲುತ್ತಿದ್ದೇವೆ ಎನಿಸುತ್ತಿರುತ್ತದೆ.

ಕಾಂಕ್ರೀಟ್ ಹಾಗೂ ಕಬ್ಬಿಣಗಳಿಂದ ಸೂಪರ್ ಟ್ರೀಗಳನ್ನು ನಿರ್ಮಿಸಿದ್ದಾರೆ. ಇವುಗಳ ಕೊನೆಯಲ್ಲಿ ಕಬ್ಬಿಣದ ಛಡಿಗಳ ಜಾಲವನ್ನು ಹಬ್ಬಿಸಿದ್ದಾರೆ. ಇದು ಕೆನೊಪಿಯಂತೆ ಕಾಣುತ್ತದೆ. ಈ ಟ್ರೀಗಳ ಒಳಗೆ ಟ್ಯೂಬ್‌ಗಳು, ವೈರ್‌ಗಳು, ಕೇಬಲ್‌ಗಳು ತುಂಬಿವೆ. ಈ ಹದಿನೆಂಟು ಸೂಪರ್ ಟ್ರೀಗಳು 30 ದೇಶಗಳ 200ಕ್ಕೂ ಹೆಚ್ಚು ಪ್ರಭೇದಗಳ 1 ಲಕ್ಷ 63 ಸಾವಿರಕ್ಕೂ ಹೆಚ್ಚು ಸಸ್ಯಗಳನ್ನು ತಮ್ಮ ಮೈತುಂಬ ಹೊದ್ದುಕೊಂಡಿವೆ. ಈ ಸೂಪರ್ ಟ್ರೀಗಳು ಹಗಲಿನಲ್ಲಿ ನಮಗೆ ನೆರಳು, ತಂಪನ್ನು ನೀಡಿದರೆ ಸಂಜೆಯ ಸಮಯದಲ್ಲಿ ಮನರಂಜನೆ ನೀಡುತ್ತವೆ. ಗಿಡಗಳಲ್ಲಿ ಅಡಗಿರುವ ವಿದ್ಯುದ್ದೀಪಗಳು ಸಂಗೀತಕ್ಕೆ ತಕ್ಕಂತೆ ಬಗೆ ಬಗೆಯ ಬಣ್ಣಗಳನ್ನು ಹೊರಚೆಲ್ಲುತ್ತ ಮನಸ್ಸನ್ನು ಸೂರೆಗೊಳ್ಳುತ್ತವೆ.